**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.</u>**

**<u>ಸಿಸಿ ನಂಃ 38/2024</u>**

| | | |
|---|---|---|
| ಹೆಸರು | ನಂಜುಂಡನಾಯಕ | ಸಿ.ಡಬ್ಲ್ಯೂ 6 |
| ತಂದೆಯ ಹೆಸರು | ನಂಜುಂಡಯ್ಯ | ಪಿ.ಡಬ್ಲ್ಯೂ 5 |
| ವಯಸ್ಸು | 32 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸ ಸ್ಥಳ | ಹೊಸಹೆಮ್ಮಿಗೆ ಗ್ರಾಮ | |

ಸಾಕ್ಷಿಗೆ ದಿನಾಂಕಃ 20.08.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದ ಃ</u>**

ಚಾ.ಸಾ. 1 ನನ್ನ ಅತ್ತಿಗೆ, ಚಾಸಾ-2 ರಿಂದ 5, 7 ರಿಂದ 9 ಗೊತ್ತು. ಮೃತ ರವಿ ನನಗೆ ಅಣ್ಣನಾಗ ಬೇಕು. ದಿನಾಂಕ 03.03.2023 ರಂದು ರವಿರವರು ಚಾಸಾ-2 ರವರ ಜೊತೆ ಟಿ ಟಿ ವಾಹನದಲ್ಲಿ ಬೆಂಗಳೂರಿನ ಕೃಷಿ ಮೇಳಕ್ಕೆ ಹೋಗಿದ್ದರು. ಚಾಸಾ-7 ರವರು ನನಗೆ ಅಪಘಾತದ ಬಗ್ಗೆ ನಮ್ಮ ಮನೆಯ ಬಳಿ ಬಂದು ಹೇಳಿರುತ್ತಾರೆ. ಆಗ ನಾನು ಮತ್ತು ನನ್ನ ಅಣ್ಣಂದಿರು ಮಾದೇಗೌಡ ಅಸ್ಪತ್ರೆಗೆ ಹೋಗಿರುತ್ತೇವೆ. ನಾನು ನೋಡಿದಾಗ ರವಿ ರವರಿಗೆ ತಲೆ ಮತ್ತು ಕಾಲಿಗೆ ಪೆಟ್ಟಾಗಿತ್ತು. ನಾನು ಅಪಘಾತದ ಬಗ್ಗೆ ಚಾಸಾ-2 ರವರನ್ನು ಕೇಳಲಾಗಿ ಕಾಗೇಪುರ ಗೇಟ್ ಬಳಿ ಟೀ ಕುಡಿಯಲು ವಾಹನವನ್ನು ನಿಲ್ಲಿಸಿ ಶೌಚಕ್ಕೆ ಹೋಗಿ ಬರುವಾಗ ಕೆಎ-52-ಎಂ-1720 ನಂಬರಿನ ಕಾರು ಅತೀ ವೇಗವಾಗಿ ಬಂದು ಡಿಕ್ಕಿಪಡಿಸಿರುತ್ತದೆ ಎಂದು ಹೇಳಿರುತ್ತಾರೆ. ಗಾಯಾಳುವನ್ನು ಮೈಸೂರಿನ ಜೆ ಎಸ್ ಎಸ್ ಅಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ದಿನಾಂಕ 04.03.2023 ರಂದು ಬೆಳಿಗ್ಗೆ 9.00 ಗಂಟೆಗೆ ರವಿ ರವರು ಮೃತರಾಗಿರುತ್ತಾರೆ. ಅಪಘಾತಕ್ಕೆ ಕಾರಿನ ಚಾಲಕ ಕಾರಣ ಎಂದು ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಎಪಿಪಿ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ವಾಟೀ ಸವಾಲಿಗೆ ಅನುಮತಿಸಲಾಯಿತು.**

**<u>ಪಾಟೀ ಸವಾಲುಃ ಎ ಪಿ ಪಿ ರವರಿಂದ ಃ</u>**

2024 ರಲ್ಲಿ ಅಪಘಾತವಾಗಿ ಮರು ದಿನ ಮೃತರಾಗಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು ಃಆರೋಪಿ ಪರ ವಕೀಲರಿಂದ**

ನನ್ನ ಅಣ್ಣ ಕೃಷಿಮೇಳಕ್ಕೆ ಹೋಗಿರುವುದನ್ನು ಖುದ್ದಾಗಿ ನೋಡಿರುತ್ತೇನೆ. ಕೃಷಿಮೇಳಕ್ಕೆ ಯಾರು ಯಾರು ಹೋಗಿರುತ್ತಾರೆ ಎಂದು ಅವರ ಹೆಸರು ಗೊತ್ತಿರುವುದಿಲ್ಲ. ಎಷ್ಟು ಜನ ಹೋಗಿದ್ದರು ಎಂದು ನಾನು ತಿಳಿದುಕೊಂಡಿರುವುದಿಲ್ಲ. ಟಿ ಟಿ ವಾಹನ ಅಗಿದ್ದು ಅದರ ನೊಂದಣಿ ಸಂಖ್ಯೆ ಗೊತ್ತಿರುವುದಿಲ್ಲ. ಚಾಸಾ-7 ರವರು ಸಜೆ 6.30 ರ ಸಮಯದಲ್ಲಿ ನಮ್ಮ ಮನೆಯ ಬಳಿ ಬಂದು ಅಪಘಾತದ ಬಗ್ಗೆ ತಿಳಿಸಿರುತ್ತಾರೆ. ಚಾಸಾ-2 ರವರು ಚಾಸಾ-7 ರವರಿಗೆ ದೂರವಾಣಿ ಕರೆ ಮಾಡಿ ತಿಳಿಸಿರುತ್ತಾರೆ. ನಾನು, ನನ್ನ ಅಣ್ಣ, ಅತ್ತಿಗೆ 7.45 ರಿಂದ 8.00 ಗಂಟೆಯಿ ಅವದಿಯಲ್ಲಿ ಮಾದೇಗೌಡ ಅಸ್ಪತ್ರೆಗೆ ಹೋಗಿರುತ್ತೇವೆ.ನನ್ನ ಅಣ್ಣನು ನೇರವಾಗಿ ಮಾದೇಗೌಡ ಅಸ್ಪತ್ರೆಗೆ ಬಂದಿರುತ್ತಾರೋ ಇಲ್ಲವೋ ತಿಳಿದುಕೊಂಡಿರುವುದಿಲ್ಲ. ಮಾದೇಗೌಡ ಅಸ್ಪತ್ರೆಗೆ ಹೋದಾಗ 8.00 ರಿಂದ 8.15 ಅಗಿತ್ತು. ಮೈಸೂರಿನ ಅಸ್ಪತ್ರೆಗೆ ಹೋದಾಗ 12.15 ಅಗಿತ್ತು.

ಅಪಘಾತದ ಬಗ್ಗೆ ನನಗೆ ಸರಿಯಾದ ಮಾಹಿತಿ ಇಲ್ಲ ಎಂದರೆ ಚಾಸಾ-2 ರವರು ಹೇಳಿರುವುದನ್ನು ಹೊರತುಪಡಿಸಿ ಬೇರೆ ಗೊತ್ತಿರುವುದಿಲ್ಲ. ನಾವು ಮಾದೇಗೌಡ ಅಸ್ಪತ್ರೆಗೆ ಹೋಗುವವರೆಗೆ ಚಾಸಾ-2 ಅಲ್ಲಿಯೇ ಇದ್ದರು. ಚಾಸಾ-2 ರವರು ನಾವು ಹೋಗುವವರೆಗೆ ಮಾದೇಗೌಡ ಅಸ್ಪತ್ರೆಯಲ್ಲಿ ಇದ್ದರು. ಚಾಸಾ-2 ರವರು ಮೈಸೂರಿನ ಅಸ್ಪತ್ರೆಗೆ ಬಂದಿರುತ್ತಾರೋ ಇಲ್ಲವೋ ಗೊತ್ತಿರುವುದಿಲ್ಲ. ನಾನು ನೇರವಾಗಿ ಮೈಸೂರಿನ ಜೆ ಎಸ್ ಎಸ್ ಅಸ್ಪತ್ರೆಗೆ ಹೋಗಿದ್ದೆ ಎಂದರೆ ಸರಿಯಲ್ಲ. ಅಪಘಾತಪಡಿಸಿರುತ್ತದೆ ಎಂದು ಹೇಳುವ ಕಾರಿನ ಕಂಪನಿ ಗೊತ್ತಿರುವುದಿಲ್ಲ. ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ನಾನು ಪೋಲೀಸರ ಮುಂದೆ ಯಾವಾಗ ಎಲ್ಲಿ ಹೇಳಿಕೆ ನೀಡಿರುತ್ತೇನೆ ಎಂದು ನೆನಪಿರುವುದಿಲ್ಲ. ನಾನು ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣನು ರಸ್ತೆಯಲ್ಲಿ ಬರುತ್ತಿದ್ದ ವಾಹನವನ್ನು ಗಮನಿಸದೇ ಆತನ ನಿರ್ಲಕ್ಷ್ಯತನದಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಅಪಘಾತದ ಪರಿಹಾರಕ್ಕೆ ಸಲ್ಲಿಸಿರುವ ಅರ್ಜಿಗೆ ಸಹಾಯವಾಗಲೀ ಎಂದು ಸುಳ್ಳ

ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-2 ರವರು ನಾನು ಆಸ್ಪತ್ರೆಗೆ ಹೋದ ನಂತರ ಬಂದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ತಪ್ಪಿ ನಿಂದ ಅಪಘಾತವಾಗದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಮಳವಳ್ಳಿ.